ಬಂಡಲಿಂಗಂಹಳ್ಳಿ ರೆವಿನ್ಯೂ ಮೀಟಿಂಗ್ ಮುಗಿಯಿತು.

ರೆವಿನ್ಯೂ ಮೀಟಿಂಗ್ ಎಂದರೆ ರೆವಿನ್ಯೂ ಇಲಾಖೆಯವರೇ ಮಾಡುತ್ತಾರೆ. ಆದರೆ ಅಲ್ಲಿಗೆ ಪೊಲೀಸರು ಕೂಡ ಬಂದಿದ್ದಾರೆ. ತಾಲ್ಲೂಕು ಪಂಚಾಯ್ತಿಯಲ್ಲಿ ಯಾವ ಊರಿಗೂ ಇಲ್ಲದ ಸಮಸ್ಯೆಗಳು ಆ ಊರಿಗೇ ಇವೆ. ಊರು ಚಿಕ್ಕದಾದರೂ ಬೀದಿಗೊಬ್ಬ ನಾಯಕ. ನಾಯಕನಿಗೊಂದಷ್ಟು ಹಿಂಬಾಲಕರು. ಅಂದುಕೊಂಡಂತೆಯೇ ರೈತರೆಲ್ಲರೂ ತಲೆಗೊಂದು ಸಮಸ್ಯೆ ಹೊತ್ತು ಕಚೇರಿಯ ಬಳಿ ಜಮಾಯಿಸಿದರು. ಹಕ್ಕುಪತ್ರಗಳೆಂದು, ಸರ್ಕಾರಿ ಭೂಮಿಯೆಂದು, ನಮ್ಮ ಭೂಮಿ ಇನ್ನೂ ಜಾಸ್ತಿ ಇದೆಯೆಂದು... ಹೀಗೆ ಹಲವಾರು ಸಮಸ್ಯೆಗಳನ್ನು ಹೇಳಿಕೊಂಡರು. ಎಷ್ಟು ಲಟಾಪಟಿಗಳಾಗುತ್ತದೋ ಎಂದುಕೊಂಡರು ಅಧಿಕಾರಿಗಳು. ಆದರೆ ಎಲ್ಲವೂ ಸಲೀಸಾಗಿ ನಡೆಯಿತು. ಒಂದೆರಡು ಸಣ್ಣಪುಟ್ಟ ಗಲಾಟೆಗಳನ್ನು ಬಿಟ್ಟರೆ ವಿವಾದಗಳೆಲ್ಲವೂ ಬಗೆಹರಿದವು. ಕಚೇರಿ ಸಿಬ್ಬಂದಿಗಳು ಸ್ವಲ್ಪ ಆರಾಮಾದರು. ತಹಶೀಲ್ದಾರ ವಯಸ್ಸಿನಲ್ಲಿ ಚಿಕ್ಕವ ಮತ್ತು ಒಳ್ಳೆಯ ಮನುಷ್ಯ. ಭೂಮಿಯಿಲ್ಲದ ಎಷ್ಟೋ ಬಡವರಿಗೆ ಭೂಮಿ ಹಂಚಿದ್ದಾನೆ. ಯಾವ ಊರಿಗೆ ಹೋದರೂ ರೈತರು ಅವನಿಗೆ ಕೈಯೆತ್ತಿ ನಮಸ್ಕರಿಸುತ್ತಾರೆ. ಸಣ್ಣ ವಿವಾದವೂ ಇರಬಾರದೆಂದು ಒಂದಕ್ಕೆರಡು ಬಾರಿ ಸಮಸ್ಯೆಗಳನ್ನು ಕೇಳಿ ರೆವಿನ್ಯೂ ಇನ್‌ಸ್ಪೆಕ್ಟರ್‌ಗೆ ಆನ್‌ಲೈನ್‌ಗೆ ಸಂಬಂಧಪಟ್ಟ ಸೂಚನೆಗಳನ್ನು ಕೊಟ್ಟು ಕಾರಿನ ಬಳಿ ಬಂದ.

ಅದಾಗಲೇ ಹೊತ್ತು ಮುಳುಗುತ್ತಿದೆ. ಎಲ್ಲರೂ ತಂತಮ್ಮ ದಾರಿ ಹಿಡಿದರು. ಕಾರು ಕದಲುತ್ತಿರುವಾಗಲೇ ಎಲ್ಲಿಂದಲೋ ಓಡೋಡಿ ಬಂದ ಬೊಂದಯ. ಅರವತ್ತರ ಆಸುಪಾಸು ಇರಬಹುದು. ಬಾಗಿದ ಸೊಂಟ, ಹರಿದ ಅಂಗಿ, ಮಾಸಿದ ಪಂಚೆ, ಬಿಳಿ ಗಡ್ಡ... ನೋಡಲು ಒರಟಾಗಿದ್ದಾನೆ. ಕಾರಿಗೆ ಅಡ್ಡಬಂದು, 'ಅಯ್ಯಾ... ನನ್ನ ಭೂಮಿ... ನನ್ನ ಭೂಮಿ...' ಎಂದ.

ಕಾರು ನಿಲ್ಲಿಸಿ ಗ್ಲಾಸ್ ಇಳಿಸಿ ಅಸಮಾಧಾನದಿಂದ ನೋಡುತ್ತ, 'ಆಂ... ನಿನ್ನ ಭೂಮಿ ಏನಾಯಿತು' ಎಂದು ಕೇಳಿದನು ತಹಶೀಲ್ದಾರ. 'ಇತ್ತಲ್ಲ... ಕಾಲುವೆ ಕೆಳಗೆ ಎರಡೆಕರೆ ಖುಷ್ಕಿ ಭೂಮಿ. ಅದು ನನ್ನದೇ... ನಲವತ್ತು ವರ್ಷದ ಹಿಂದೆಯೇ ಬರೆದುಕೊಟ್ಟಿದ್ದಾರೆ. ಹಕ್ಕುಪತ್ರ ಇಲ್ಲವೆಂದು ಮೊನ್ನೆ ಹಿಂಪಡೆದಿದ್ದಾರೆ. ಹೇಗಾದರೂ ಮಾಡಿ ನನ್ನ ಭೂಮಿ ನನಗೆ ಕೊಡಿಸಬೇಕು ಸಾರೂ. ಈಗ ಅದು ಬೆಳೆ ಬೆಳೆಯುವ ಚಿನ್ನದಂತಹ ಭೂಮಿ...' ಅಂಗಲಾಚಿದ.

ಏನನಿಸಿತೋ, ತಹಶೀಲ್ದಾರ ತಾಳ್ಮೆಯಿಂದ ಬೊಂದಯನ ಬಳಿ ವಿವರಗಳನ್ನು ಕೇಳಿ ತಿಳಿದುಕೊಂಡನು. ಎಲ್ಲವನ್ನು ಕೇಳಿದ ನಂತರ ನಕ್ಕು, 'ರಿಜಿಸ್ಟ್ರೇಷನ್ ಆಗಿಲ್ಲ... ಸಾಗುವಳಿ ಮಾಡಿಲ್ಲ... ಸಾಕ್ಷ್ಯಗಳಿಲ್ಲ... ಹೋಗಲಿ, ಅನುಭವಿಯೂ ಅಲ್ಲ... ಆದರೆ, ನಿನ್ನ ಹೆಸರಿಗೆ ಬರೆಯಬೇಕು... ಅಷ್ಟಕ್ಕೂ ಆ ಭೂಮಿ ಯಾರದಯ್ಯಾ... ನಿನಗೆ ಹೇಗೆ ಬಂದಿತು...' ಕೇಳಿದನು ತಹಶೀಲ್ದಾರ.

'ನಮ್ಮೂರೇ ಸಾರೂ... ಭೂಪಾಲ್ ರಾವು ದೊರೆಯದು. ನನ್ನ ಹೆಸರಿಗೆ ಬರೆದಿದ್ದಾರೆ' ಹೇಳಿದ.

ಒಮ್ಮೆಗೇ ಬೆಚ್ಚಿಬಿದ್ದ ತಹಶೀಲ್ದಾರ. ಅದು ಸ್ವಲ್ಪ ವಿವಾದಿತ ಹಾಗೂ ಕೆರೆಯ ಭಾಗದ ಭೂಮಿ. ಅದರ ತಂಟೆಗೆ ಹೋಗುವುದೇ ಬೇಡವೆಂದುಕೊಂಡು, 'ರಿಜಿಸ್ಟ್ರೇಷನ್ ಇಲ್ಲದಿದ್ದರೆ ಹಕ್ಕುಪತ್ರ ನೀಡಬಾರದು...' ಎಂದ.

'ಅದೇನು ಸಾರೂ... ಬಡವರಿಗೆ ಯಾವ ಕಾಗದಪತ್ರಗಳಿಲ್ಲದಿದ್ದರೂ ನೀವು ನಿಂತು ಮಾಡಿಸಿಕೊಡುತ್ತಿದ್ದೀರಂತೆ. ನನಗೆ ದೊರೆ ಬರೆದುಕೊಟ್ಟಿರುವ ಪತ್ರವಿದೆ...' ಎನ್ನುತ್ತ ಪ್ಲಾಸ್ಟಿಕ್ ಕವರಿನ ಮಡಿಕೆಗಳಲ್ಲಿ ಮುಚ್ಚಿಟ್ಟಿದ್ದ ಒಂದು ಹಳೆಯ ಕಾಗದವನ್ನು ತೆಗೆದುಕೊಟ್ಟ. ಅದು ನಾಲ್ಕು ತುಂಡುಗಳಾಗಿತ್ತು. ಅಕ್ಷರಗಳು ಒಂದಕ್ಕೊಂಡು ಸೇರಿಕೊಂಡುಬಿಟ್ಟಿವೆ. ಆತನ ಸಮಾಧಾನಕ್ಕಾಗಿ ಎಂಬಂತೆ ಅತ್ತಿತ್ತ ತಿರುವಿ ನೋಡಿ ಕೊಡುತ್ತಾ, 'ಇದು ಕೇವಲ ಕಾಗದ ಅಷ್ಟೇ... ಕೇವಲ ಕೈ ಬರಹದಲ್ಲಿ ಏನೂ ನಡೆಯುವುದಿಲ್ಲ...' ಎಂದ.